ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಮಂಗಳವಾರ, ದಿನಾಂಕ : 23ನೇ ಜುಲೈ, 2019

ಪಂಚಾಯತ್‌ಗಳ ನಮೂನೆ-9 ಮತ್ತು ನಮೂನೆ-11ಎ ಬಗ್ಗೆ

ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

517 (521) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಮನಗರ ಜಿಲ್ಲೆ, ಚನ್ನಪಟ್ಟಣದ ಕೆ.ಹೆಚ್.ಬಿ. ಬಡಾವಣೆಯ ನಿವೇಶನ ಮತ್ತು ಮನೆಗಳಿಗೆ ಗ್ರಾಮ ಪಂಚಾಯಿತಿಗಳು ನಮೂನೆ-9 ಮತ್ತು ನಮೂನೆ-11ಎ ವಿತರಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ದಿನಾಂಕ: 09-1-2015ರಲ್ಲಿ ಸುತ್ತೋಲೆ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಬಡಾವಣೆಯನ್ನು ಕರ್ನಾಟಕ ಪುರಸಭೆಗಳ ಕಾಯ್ದೆ 1964ರಂತೆ ಚನ್ನಪಟ್ಟಣ ನಗರಸಭೆಗೆ ಹಸ್ತಾಂತರಿಸದಿದ್ದರೂ ಈ ಸ್ವತ್ತುಗಳಿಗೆ ಕಾನೂನಿನ ಮಾನ್ಯತೆ ಇದೆಯೇ ; (ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ಈ ಹಿಂದೆ ಇದ್ದಂತೆ ಕೆ.ಹೆಚ್.ಬಿ. ಬಡಾವಣೆಗೆ ಗ್ರಾಮ ಪಂಚಾಯಿತಿಗಳು ನಮೂನೆ-9 ಮತ್ತು ನಮೂನೆ-11ಎ ವಿತರಿಸಲು ಸರ್ಕಾರಕ್ಕಿರುವ ತೊಂದರೆಗಳೇನು ? (ಮಾಹಿತಿ ನೀಡುವುದು)